International Journal of Kannada Research
www.kannadajournal.com

ISSN: 2454–5813
IJKR 2017; 3(4): 160-162
© 2017 IJKR
www.kannadajournal.com
Received: 26-08-2017
Accepted: 27-09-2017

**ಕೆಂಡಮ್ಮ.ಕೆ**
ಸಂಶೋಧನಾ ವಿದ್ಯಾರ್ಥಿನಿ
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ವಿಭಾಗ
ಮಾನಸಗಂಗೋತ್ರಿ ಮೈಸೂರು

**Correspondence**
**ಕೆಂಡಮ್ಮ.ಕೆ**
ಸಂಶೋಧನಾ ವಿದ್ಯಾರ್ಥಿನಿ
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ವಿಭಾಗ
ಮಾನಸಗಂಗೋತ್ರಿ ಮೈಸೂರು

# ಹಾರ್ನಹಳ್ಳಿ ಗ್ರಾಮದ ಶ್ರೀ ಸೋಮೇಶ್ವರ ದೇವಾಲಯದ ಭಿತ್ತಿ-ಶಿಲ್ಪಗಳು

**ಕೆಂಡಮ್ಮ.ಕೆ**

ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಹೋಬಳಿ ಕೇಂದ್ರವಾದ ಹಾರ್ನಹಳ್ಳಿಯು ಸಾಂಸ್ಕೃತಿಕ ಮತ್ತು ಐತಿಹಾಸಿಕವಾಗಿ ಹಿರಿಮೆ-ಗರಿಮೆಯನ್ನು ಹೊಂದಿದ್ದು ಈ ಹಾರ್ನಹಳ್ಳಿ ಗ್ರಾಮದಲ್ಲಿ ಹೊಯ್ಸಳರ ಕಾಲಕ್ಕೆ ಸಂಬಂಧಿಸಿದಂತೆ ಎರಡು ದೇವಾಲಯಗಳು ನಿರ್ಮಾಣವಾಗಿದ್ದು. ಮೊದಲನೆಯದು ಕೇಶವ ಎರಡನೆಯದು ಸೋಮೇಶ್ವರ ದೇವಾಲಯ ಹೀಗಾಗಿ ನಾನು ಸಂಶೋಧನಾ ಕಾರ್ಯ ನಿಮಿತ್ತ ಭೇಟಿ ನೀಡಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಸೋಮೇಶ್ವರ ದೇವಾಲಯದ ಭಿತ್ತಿ ಶಿಲ್ಪಗಳು ನನಗೆ ಗೋಚರಿಸಿದ್ದವು. ಹಾಗಾಗಿ ಈ ಸೋಮೇಶ್ವರ ದೇವಾಲಯವು ಕ್ರಿ.ಶ.1070ರಲ್ಲಿ ಹೊಯ್ಸಳ ರಾಜ ಸೋಮೇಶ್ವರನು ಈ ದೇವಾಲಯವನ್ನು ಕಟ್ಟಿಸಿದ್ದು ಈ ದೇವಾಲಯವು ಗರ್ಭಗೃಹ, ಸುಕನಾಸಿ, ನವರಂಗ ಹೊಂದಿದ್ದು ಏಕಕೂಟ ದೇವಾಲವಾಗಿದ್ದು ಇದರ ಭಿತ್ತಿಯಲ್ಲಿ ಅನೇಕ ದೃಶ್ಯಗಳ ಭಿತ್ತಿ ಶಿಲ್ಪಗಳು ಕಂಡು ಬಂದಿದ್ದು ಈ ದೇವಾಲಯದ ಹೊರಭಾಗದ ಭಿತ್ತಿಯಲ್ಲಿ ವಿಶಿಷ್ಟ ನಿರ್ಮಾಣದ ಶೈಲಿಯಿಂದ ಕೂಡಿರುವ ಈ ಭಿತ್ತಿ ಶಿಲ್ಪಗಳನ್ನು ಕುರಿತು ಸಿದ್ದಪಡಿಸಿದ ಸಾರವೇ ಈ ಲೇಖನ

**1. ಶಿವ ಪಾರ್ವತಿ:** ಈ ದೇವಾಲಯದ ಭಿತ್ತಿಯಲ್ಲಿ ಮೊದಲನೆಯದಾಗಿ ಶಿವನು ಸುಖಾಸನದಲ್ಲಿ ಕುಳಿತಿದ್ದಾನೆ. ಈ ದೇವನ ಎಡಭಾಗದ ತೊಡೆಯ ಮೇಲೆ ತನ್ನ ಪತ್ನಿಯಾದ ಪಾರ್ವತಿಯನ್ನು ಕೂರಿಸಿಕೊಂಡಿದ್ದಾನೆ. ಪಾರ್ವತಿ ದೇವಿಯು ಕೈಯಲ್ಲಿ ಪದ್ಮ ಪುಷ್ಪವನ್ನು ಹಿಡಿದು ಸುಖಾಸನದಲ್ಲಿ ಕುಳಿತ್ತಿದ್ದಾಳೆ. ಬಲಗೈ ಶಿವನನ್ನು ತಬ್ಬಿಹಿಡಿದಿರುವಂತೆ ರಚಿಸಲಾಗಿದೆ. ಶಿವನು ಚತುರ್ಭುಜ ಹೊಂದಿದ್ದು ಎಡಗೈಯಲ್ಲಿ ಪಾರ್ವತಿಯನ್ನು ತಬ್ಬಿಕೊಂಡಂತಿದೆ. ಬಲಗೈಯಲ್ಲಿ ಮಣಿ ಹಸ್ತ ಉಳಿದೆರಡು ಕೈಗಳಲ್ಲಿ ತ್ರಿಶೂಲ ಮತ್ತು ಡಮರು ಹಿಡಿದುಕೊಂಡಂತಿವೆ. ಈ ದೇವ ದೇವತೆಯ ಮೇಲೆ ಬಿಡಿಸಲಾಗಿರುವ ವಸ್ತ್ರಾಭರಣಗಳು ಸೂಕ್ಷ್ಮಕೆತ್ತನೆಯಿಂದ ಕೂಡಿದ್ದು ಸುಂದರವಾಗಿವೆ. ಶಿರದ ಮೇಲೆ ಅರ್ಧಚಂದ್ರಾಕೃತಿಯಲ್ಲಿ ಬಿಡಿಸಲಾಗಿರುವ ಲತಾ ಬಳ್ಳಿಗಳ ಅಲಂಕರಣೆ ಕೆತ್ತನೆ ಮಾಡಲಾಗಿದೆ.

**2. ಚಂದ್ರಶೇಖರ:** ಸಮಭಂಗಿಯಲ್ಲಿ ನಿಂತಿರುವ ಈ ದೇವನು ಚರ್ತುಭುಜವನ್ನು ಹೊಂದಿದ್ದಾನೆ. ಕೈಗಳಲ್ಲಿ ಪದ್ಮ, ಪರಶು,ಅಭಯ ಹಸ್ತ, ಜಿಂಕೆಯನ್ನು ಎತ್ತಿ ಹಿಡಿದಿದ್ದಾನೆ. ಮೈಮೇಲೆ ಬಿಡಿಸಲಾಗಿರುವ ವಸ್ತ್ರಾಭರಣ ಸುಂದರವಾಗಿವೆ. ಈ ದೇವನ ಇಕ್ಕೆಲಗಳಲ್ಲಿ ಫಲ ಮತ್ತು ಪುಷ್ಪವನ್ನು ಹಿಡಿದು ತ್ರಿಭಂಗಿಯಲ್ಲಿ ನಿಂತಿರುವುದು ಮತ್ತು ಇಕ್ಕೇಲಗಳಲ್ಲಿ ಸ್ತ್ರೀ ದೇವತೆಗಳಿದ್ದಾರೆ.

**3. ನೃತ್ಯ ಸರಸ್ವತಿ:** ನೃತ್ಯ ಭಂಗಿಯಲ್ಲಿ ನಿಂತಿರುವ ಈ ದೇವಿಯು ಚರ್ತುಭುಜಾಧಾರಿಣಿಯಾಗಿದ್ದಾಳೆ. ಕೈಗಳಲ್ಲಿ ಪಾಶ, ಅಂಕುಶ, ಜಪಮಣಿ ಮತ್ತು ಪುಸ್ತಕವನ್ನು ಹಿಡಿದು ಕೊಂಡಿದ್ದಾಳೆ. ಬಲಗಾಲನ್ನು ನೆಲಕ್ಕೂರಿ ಎಡಗಾಲನ್ನು ಮೇಲೆ ಎತ್ತಿದ್ದು, ಇಕ್ಕೆಲಗಳಲ್ಲಿ ಸಂಗೀತಗಾರರು ಸಲಕರಣೆಗಳನ್ನು ಹಿಡಿದುಕೊಂಡು ಸಂಗೀತವನ್ನು ನುಡಿಸುತ್ತಿದ್ದಾರೆ.

**4. ಗರುಡ ದೇವ:** ಗರುಡ ದೇವನು ತನ್ನ ದೇವನಾದ ವಿಷ್ಣು ಮತ್ತು ಲಕ್ಷ್ಮೀಯರನ್ನು ತನ್ನ ಭುಜದ ಮೇಲೆ ಕೂರಿಸಿಕೊಂಡು ಮುನ್ನಡೆಯುತ್ತಿರುವಂತೆ ರಚಿಸಲಾಗಿದೆ. ವಿಷ್ಣುವಿನ ತೊಡೆಯ ಮೇಲೆ ಲಕ್ಷ್ಮೀಯು ಸುಖಾಸನದಲ್ಲಿ ಕುಳಿತಿದ್ದಾಳೆ. ಈ ದೇವಿಯು ಎಡಗೈಯಲ್ಲಿ ಪದ್ಮ ಪುಷ್ಪವನ್ನು ಹಿಡಿದುಕೊಂಡಿದ್ದಾಳೆ. ಬಲಗೈಯಲ್ಲಿ ವಿಷ್ಣುವನ್ನು ಹಿಡಿದುಕೊಂಡಂತಿದೆ. ವಿಷ್ಣುವಿನ ಬಲಗೈ ಅಭಯ ಹಸ್ತ ಹಿಂದಿನ ಎರಡು ಕೈಗಳಲ್ಲಿ ಶಂಖ, ಚಕ್ರವನ್ನು ಹಿಡಿದುಕೊಂಡಿದ್ದಾನೆ. ಮೈಮೇಲೆ ಬಿಡಿಸಲಾಗಿರುವ ವಸ್ತ್ರಾಭರಣಗಳು ಸುಂದರವಾಗಿದೆ.

**5. ವರಹಾ ಮೂರ್ತಿ:** ವರಹಾ ಮೂರ್ತಿಯು ಭೂದೇವಿಯನ್ನು ತನ್ನ ಎಡಭುಜದ ಮೇಲೆ ಕೂರಿಸಿಕೊಂಡಿದ್ದಾನೆ. ಭೂದೇವಿಯು ತನ್ನ ಎರಡೂ ಕೈಗಳಲ್ಲಿ ಫಲ ಮತ್ತು ಪದ್ಮ ಪುಷ್ಪವನ್ನು ಹಿಡಿದುಕೊಂಡಿದ್ದಾಳೆ. ವರಹಾಮೂರ್ತಿಯು ಹಿರಣ್ಯಕ್ಷನನ್ನು ತನ್ನೆರಡೂ ಕಾಲುಗಳಲ್ಲಿ ತುಳಿದುಕೊಂಡಿದ್ದಾನೆ. ತನ್ನ ಆರು ಕೈಗಳಲ್ಲಿ ಕತ್ತಿಯಿಂದ ಹಿರಣ್ಯನ ಸೈನಿಕನಿಗೆ ಚುಚ್ಚಿದ್ದಾನೆ. ಒಂದು ಕೈಯಲ್ಲಿ ಫಲ, ಚಕ್ರ, ಶಂಖ(ಮುರಿದಿದೆ) ಗಧೆ ಹಿಡಿದುಕೊಂಡಿದ್ದಾನೆ. ಸುಂದರವಾಗಿ ರಚಿಸಲಾಗಿರುವ ಈ ದೇವನ ಮೈಮೇಲೆ ಬಿಡಿಸಲಾಗಿರುವ ಆಭರಣಗಳು ಸುಂದರವಾಗಿವೆ.

**6. ತ್ರಿವಿಕ್ರಮ:** ಈ ದೇವನು ತನ್ನ ಬಲಗಾಲನ್ನು ಆಕಾಶಕ್ಕೆತ್ತಿ ಎಡಗಾಲನ್ನು ಭೂಮಿಯ ಮೇಲೆ ಇರಿಸಿದ್ದಾನೆ. ಚತುರ್ಭುಜ ಹೊಂದಿರುವ ಈ ದೇವನು ಬಲಗೈಯಲ್ಲಿ ಫಲ ಮತ್ತು ಪದ್ಮ ಪುಷ್ಪ ಎಡಗೈಯಲ್ಲಿ ಶಂಖ ಮತ್ತು ಚಕ್ರ ಹಿಡಿದುಕೊಂಡಿದ್ದಾನೆ. ಮೇಲ್ಭಾಗದಲ್ಲಿ ಲಕ್ಷ್ಮೀ ಕುಳಿತಿದ್ದಾಳೆ. ಎಡಭಾಗದಲ್ಲಿ ಫಲ ಮತ್ತು ಪುಷ್ಪ ಹಿಡಿದಿರುವ ಸ್ತ್ರೀ. ಬಲಭಾಗದಲ್ಲಿ ಕಾಲನ್ನು ಮೇಲೆತ್ತಿದ್ದಾನೆ.

**7. ಉಗ್ರನರಸಿಂಹ:** ನರಸಿಂಹ ದೇವನು ಉಗ್ರ ರೂಪವನ್ನು ತಾಳಿ ತನ್ನ ತೊಡೆಯ ಮೇಲೆ ಹಿರಣ್ಯಕ್ಷನನ್ನು ಮಲಗಿಸಿಕೊಂಡು ಅವನ ಹೊಟ್ಟೆಯನ್ನು ತನ್ನ ಎರಡೂ ಕೈಗಳಿಂದ ಬಗೆದು ಕರಳು ಬಳ್ಳಿಯನ್ನು ಕೊರಳಿಗೆ ಹಾಕಿಕೊಳ್ಳುತ್ತಿದ್ದಾನೆ. ಮತ್ತೆರಡು ಕೈಗಳಲ್ಲಿ ಹಿರಣ್ಯನ ತಲೆ ಮತ್ತು ಕಾಲನ್ನು ಭದ್ರವಾಗಿ ಹಿಡಿದಿವೆ. ಎರಡು ಕೈಗಳಲ್ಲಿ ಶಂಖ, ಚಕ್ರವಿದೆ.(ಶಂಖ,ಚಕ್ರ ಮುರಿದು ಹೋಗಿದೆ) ಈ ದೇವನ ಇಕ್ಕೆಲಗಳಲ್ಲಿ ಪ್ರಹ್ಲಾದ ಮತ್ತು ಗರುಡ ನಿಂತಿದ್ದಾರೆ.

**8. ನೃತ್ಯ ಲಕ್ಷ್ಮೀ:** ಬಲಗಾಲನ್ನು ಭೂ ಸ್ಪರ್ಶ ಮಾಡಿ ಎಡಗಾಲು ಮೇಲಕ್ಕೆತ್ತಿದ್ದಳು. ಈ ದೇವತೆಯು ಚರ್ತುಭುಜವನ್ನು ಹೊಂದಿದ್ದಾಳೆ. ಜಪಮಣಿ, ಫಲ, ಪಾಶ. ಅಂಕುಶ ಹಿಡಿದಿದ್ದಾಳೆ. ಕೆಳಭಾಗದಲ್ಲಿ ಸ್ತ್ರೀ ಸೇವಕಿಯರು ಇದ್ದಾರೆ.

**9. ಪಾರ್ವತಿ:** ನೃತ್ಯ ಭಂಗಿಯಲ್ಲಿ ನಿಂತಿರುವ ಈ ದೇವತೆಯು ಬಲಗಾಲನ್ನು ಭೂಸ್ಪರ್ಶ ಮಾಡಿ ಎಡಗಾಲನ್ನು ಮೇಲಕ್ಕೆ ಎತ್ತಿದ್ದಾಳೆ. ಚರ್ತುಭುಜ ಹೊಂದಿರುವ ಈ ದೇವಿಯು ತ್ರಿಶೂಲ, ಡಮರು, ಕತ್ತಿ, ಫಲವನ್ನು ಹಿಡಿದುಕೊಂಡಿದ್ದಾಳೆ. ಇಕ್ಕೆಲಗಳಲ್ಲಿ ಸೇವಕಿಯರು ನಿಂತಿದ್ದಾರೆ.

**10. ಭೈರವ:** ತ್ರಿಭಂಗಿಯಲ್ಲಿ ನಿಂತಿರುವ ಈ ದೇವನು ಚರ್ತುಭುಜಾದ್ದಾರಿಯಾಗಿದ್ದು ಕೈಗಳಲ್ಲಿ ಕತ್ತಿ, ರುಂಡ ಮಾಲೆ, ತ್ರಿಶೂಲ, ಡಮರು ಹಿಡಿದಿದ್ದಾನೆ. ಬಲ ಮತ್ತು ಎಡಭಾಗದಲ್ಲಿ ಇಬ್ಬರು ಸಹಾಯಕರಿದ್ದು ಇವರ ತಲೆಯ ಕೇಶವು ಗುಂಗುರಾಗಿದೆ.

**11. ನೃತ್ಯ ಶಿವ:** ಎಡಗಾಲು ಭೂ ಸ್ಪರ್ಶ ಮಾಡಿ ಬಲಗಾಲು ಮೇಲಕ್ಕೆ ಎತ್ತಿದ್ದಾನೆ. ಚರ್ತುಭುಜಾದ್ದಾರಿಯಾಗಿದ್ದು ಹೊಂದಿದ್ದು ಜಪಮಣಿ, ಫಲ, ತ್ರಿಶೂಲ, ಢಮರು ಇಕ್ಕೆಲಗಳಲ್ಲಿ ಸಂಗೀತಗಾರರು ನಿಂತಿದ್ದಾರೆ.

**12. ಕೈಲಾಸ ಪರ್ವತ ಎತ್ತುತ್ತಿರುವ ರಾವಣ:** ರಾವಣನು ಕೈಲಾಸ ಪರ್ವತವನ್ನು ತನ್ನ ತಲೆಯ ಮೇಲೆ ಹೊತ್ತು ಕೊಂಡಿದ್ದಾನೆ. ಹತ್ತು ಕೈಗಳಲ್ಲಿ ಕತ್ತಿ, ಗುರಾಣಿ, ಎರಡು ಕೈಗಳಲ್ಲಿ ಪರ್ವತ ಹಿಡಿದಿದ್ದಾನೆ. ಕತ್ತಿ, ಖಡ್ಗ ಹಿಡಿದುಕೊಂಡಿದ್ದಾನೆ.

**13. ಗೋವರ್ಧನ ಗಿರಿಧಾರಿ ಕೃಷ್ಣ:** ತ್ರಿಭಂಗಿಯಲ್ಲಿ ನಿಂತಿರುವ ಈ ದೇವನು ಬಲಗೈ ಲಂಬ ಹಸ್ತ, ಎಡಗೈಯಲ್ಲಿ ಪರ್ವತ ಎತ್ತಿ ಹಿಡಿದಿದ್ದಾನೆ. ಸರ್ಪಗಳು ಕೆಳಗೆ ಜೊಲಾಡುತ್ತಿವೆ. ಇಕ್ಕೆಲಗಳಲ್ಲಿ ಗೋವು ಗಾಯುವ ಭಕ್ತರು ನಿಂತಿದ್ದಾರೆ.

**14. ವಿಷ್ಣು:** ಸಮಭಂಗಿಯಲ್ಲಿ ನಿಂತಿರುವ ಈ ದೇವನು ಚರ್ತುಭುಜಾದ್ದಾರಿಯಾಗಿದ್ದು, ಕೈಗಳಲ್ಲಿ ಶಂಖ, ಚಕ್ರ(ಮುಂಗೈ) ಫಲ, ಗಧೆ(ಹಿಂಗೈ) ಹಿಡಿದು ನಿಂತಿದ್ದಾನೆ. ಇಕ್ಕೆಲಗಳಲ್ಲಿ ಫಲ ಪುಷ್ಪ ಹಿಡಿದು ನಿಂತಿರುವ ಸ್ತ್ರೀ ಯರಿದ್ದಾರೆ.

**15. ಮಹಿಷಮರ್ಧಿನಿ:** ಈ ದೇವಿಯು ಅಷ್ಟಭುಜಾದ್ದಾರಿಯಾಗಿದ್ದು, ಎಂಟು ಕೈಗಳನ್ನು ಹೊಂದಿರುವ ಈ ದೇವಿಯು ತನ್ನ ಬಲಗಾಲನ್ನು ಮಹಿಷನ ಮೇಲೆ ಇಟ್ಟಿದ್ದಾಳೆ. ಒಂದು ಕೈಯಲ್ಲಿ ಮಹಿಷನನ್ನು ಹಿಡಿದಿದ್ದಾಳೆ. ಮತ್ತೊಂದು ಕೈಯಲ್ಲಿ ತ್ರಿಶೂಲ, ಕತ್ತಿ, ಗುರಾಣಿ, ಬಿಲ್ಲು, ಬಾಣ, ಶಂಖ ಮತ್ತು ಚಕ್ರ ಹಿಡಿದಿದ್ದಾಳೆ.

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ದೇವಾಲಯದಲ್ಲಿ ಕಂಡು ಬರುವ ಭಿತ್ತಿ ಶಿಲ್ಪಗಳು ದೇವಾಲಯದ ಮೂರ್ತಿಗೆ ಪೂರಕವಾಗಿ ಧಾರ್ಮಿಕ ಪ್ರಭುತ್ವ ಸಾಧಿಸುವಲ್ಲಿ ಯಶಸ್ವಿಯಾಗಿದೆ. ಈ ದೃಷ್ಠಿಯಿಂದ ಹಾರ್‍ನಹಳ್ಳಿಯ ಸೋಮೇಶ್ವರ ದೇವಾಲಯದಲ್ಲಿ ಶಿಲ್ಪಗಳು ಏಕಭಂಗಿ, ದ್ವಿಭಂಗಿ, ತ್ರಿಭಂಗಿಯಲ್ಲಿ ನಿಂತಿರುವ ಶಿಲ್ಪಗಳು ಹಾಗೂ ಅವರು ಧರಿಸಿರುವ ಆಭರಣಗಳು ಒಂದು ರೀತಿಯ ಮೆರಗನ್ನು ನೀಡುವಲ್ಲಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ ಎಂದು ಹೇಳಬಹುದು.

ಸೋಮೇಶ್ವರ ದೇವಾಲಯದ ಭಿತ್ತಿ ಶಿಲ್ಪಗಳು



ಶಿವಪಾರ್ವತಿ ಚಂದ್ರಶೇಖರ ನೃತ್ಯ ಸರಸ್ವತಿ



ಗರುಡದೇವ ವರಹಾ ಮೂರ್ತಿ


ತ್ರಿವಿಕ್ರಮ


ಉಗ್ರನರಸಿಂಹ


ನೃತ್ಯ ಲಕ್ಷ್ಮಿ


ಪಾರ್ವತಿ


ಭೈರವ


ನೃತ್ಯ ಶಿವ


ಕೈಲಾಸ ಪರ್ವತ ಎತ್ತುತ್ತಿರುವ ರಾವಣ


ಗೋವರ್ಧನಗಿರಿಧಾರಿ ಕೃಷ್ಣ


ವಿಷ್ಣು


ಮಹಿಷಮರ್ಧಿನಿ

**ಆಕರ ಗ್ರಂಥಗಳು**


1. ಕನ್ನಡ ವಿಷಯ ವಿಶ್ವಕೋಶ–ಸಂಪುಟ–2. ಪ್ರಸರಾಂಗ. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. –2007,
2. ಅಪರ್ಣ.ಕೂ.ಸ.,–ದೇವಾಲಯಗಳು ವಾಸ್ತುಶಿಲ್ಪ ಪರಿಚಯ, ಹಂಪಿ–1979.
3. ಡಾ.ಜಿ.ಮನೋಜ್– ದೇವಾಲಯ ವಾಸ್ತು ವಿಜ್ಞಾನ, ಮೈಸೂರು–2015
4. ಜಿ.ಜ್ಞಾನಾನಂದ.,–ಶಿಲ್ಪಾದರ್ಶನ, ಸಂಪುಟ–1, 2001, ಶಿಲ್ಪಾದರ್ಶ ಸಂಪುಟ–2, 2002, ಕನ್ನಡ ವಿಶ್ವವಿದ್ಯಾನಿಲಯ–ಹಂಪಿ
5. ಎಸ್.ಶೆಟ್ಟರ್–ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ–1991.
6. ಶ್ರೀಕಂಠಶಾಸ್ತ್ರಿ. ಎಸ್.–ಹೊಯ್ಸಳ ವಾಸ್ತುಶಿಲ್ಪ, ಮೈಸೂರು ವಿಶ್ವವಿದ್ಯಾನಿಲಯ–1965